ಮಾತನಾಡಿದರೆ ನನ್ನ ಅಭ್ಯಂತರ ಇಲ್ಲ. ಅವರು ಬರೆಯುತ್ತಾರೆ, ಏನಾದರೂ ಬರೆದುಕೊಂಡು ಹೋಗಲಿ. ಪತ್ರಿಕೆಗಳು ಪರ ವಿರೋಧ ಎಂದು ಸರ್ಕಾರಿ ಹಣದಿಂದ ಪ್ರಿಂಟ್ ಮಾಡುವುದಕ್ಕೆ ಹೊರಟಿದ್ದೀರಿ. ಅದಕ್ಕೆ ಏನು ಸಮಜಾಯಿಷಿ ಹೇಳುತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—ನಿನೇ ಪ್ರಶ್ನೆಗೆ ಮೊದಲೇ ಹೇಳಿದುದಕ್ಕಿಂತ ಹೆಚ್ಚಿನ ಉತ್ತರ ಏನೂ ಇಲ್ಲ. ಮೊದಲನೇ ಪ್ರಶ್ನೆಗೆ ಉತ್ತರ ಇಷ್ಟೆ. ಕೊಡ್ತೀಕರಿಸಿದ ಹಣವನ್ನು ಸಮಾಜಕಲ್ಯಾಣ ಖಾತೆಗೆ, ಅವರ ವಶಕ್ಕೆ ಕೊಡುತ್ತೇವೆ. ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗದ ಸಲಹಾ ಸಮಿತಿ ಇದೆ. ಅಲ್ಲಿ ಆಗಾಗ ಇದರ ಬಗ್ಗೆ ಕುಲಿತು ಚರ್ಚೆ ಮಾಡುತ್ತೇವೆ. ಆಮೇಲೆ ಹರಿಜನ ಗಿರಿಜನ ಎಂಬುದರ ಬದಲು ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗ ಎಂದು ಹೇಳಬೇಕೆಂದು ಹೇಳಿದ್ದಾರೆ. ಆ ಬಗ್ಗೆ ನಮ್ಮ ಆಕ್ಷೇಪಣೆ ಏನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಗೌರ್ನಮೆಂಟ್ ಆರ್ಡರ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಅದೇ ರೀತಿಯಾಗಿ ಬಳಸಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ. ಮತ್ತೊಂದು ವಿಚಾರ ಏನೆಂದರೆ ನಾವು ಹಾಸ್ಟೆಲ್‌ಗಳದ್ದೇ ಒಂದು ಡೈರೆಕ್ಟೊರೇಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಡೈರೆಕ್ಟೊರೇಟ್ ಆಫ್ ಹಾಸ್ಟೆಲ್ಸ್ ಮಾಡಬೇಕೆಂದು ಮಾಡಿದ್ದೇವೆ.

SRI MOHAMMED LIAQUDDIN BURNUDDIN.—Mr. Speaker, Sir, I had raised some problems pertaining to my district. But I fail to understand why the Hon'ble Chief Minister has not taken notice of my problems.

SRI RAMAKRISHNA HEGDE.—My apologies to the hon'ble member. I did not mention the points raised by him but I had earlier replied better. We want to set up a mini thermal unit in Bidar, because there is scarcity of electricity and even whenever there is supply of electricity it is very irregular. We are pursuing the matter and all other infrastructured facilities will be provided.

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

ಮಾನ್ಯ ಸದಸ್ಯರೊಬ್ಬರು.—ಒಂದೇ ಪ್ರಶ್ನೆಯನ್ನು ಕೇಳಬಹುದೇ ?

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಈಗ ಬೇಡ. ಪ್ರಸ್ತಾವ ಹೀಗಿದೆ :

"೧೯೮೭ನೇ ಮಾರ್ಚ್ ೩೧ರ ಅಂತ್ಯದೊಳಗೆ ಪೂರಕ ಅನುದಾನ ಸಂಖ್ಯೆ : ೧, ೩, ೪, ೫, ೧೩, ೧೪, ೧೬, ೨೧, ೨೨, ೨೭, ೨೯, ೩೨, ೩೪, ೪೦, ೪೨, ೪೫, ೪೬, ೪೮, ೪೯, ೫೦, ೫೫, ೫೫, ೫೭, ೫೮, ೬೦, ೬೨, ೬೩, ೬೪ ಮತ್ತು ೬೫ನೇ ಸಂಖ್ಯೆಗಳ ಬೇಡಿಕೆಗಳ ಬಗ್ಗೆ ಸರ್ಕಾರದವರು ಸದರಿ ವೆಚ್ಚವನ್ನು ಸಂದಾಯ ಮಾಡುವಂತಾಗಲು ಪೂರಕ ಅನುದಾನ ಪಟ್ಟಿಯಲ್ಲಿ ಸೂಚಿಸಿದ ಪೂರಬಲಗನ್ನು ವಿವರದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಈ ಸಭೆಯು ಮಂಜೂರು ಮಾಡುವುದು."

ಪ್ರಸ್ತಾವ ಅಂಗೀಕೃತವಾಯಿತು ಮತ್ತು ಪೂರಕ ಅನುದಾನಗಳನ್ನು ಮಂಜೂರು ಮಾಡಲಾಯಿತು

೧೯೮೬–೮೪ನೇ ಸಾಲಿನ ಹೆಚ್ಚುವರಿ ಅನುದಾನಗಳಿಗೆ ಸಂಬಂಧಿಸಿದ ಬೇಡಿಕೆಗಳು

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) —ಮಾನ್ಯ ಅಧ್ಯಕ್ಷರೆ, ಹೆಚ್ಚುವರಿ ಅನುದಾನಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಮಂಡಿಸುವುದಕ್ಕೆ ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"೧೯೮೬–೮೭ನೇ ಸಾಲಿನ ಹೆಚ್ಚುವರಿ ಅನುದಾನಗಳಿಗೆ ಸಂಬಂಧಿಸಿದ ಅನುದಾನಗಳನ್ನು ಮಂಡಿಸಲು ಅನುಮತಿ ನೀಡುವುದು.

(ಪ್ರಸ್ತಾವ ಅಂಗೀಕೃತವಾಯಿತು ಮತ್ತು ಅನುದಾನಗಳನ್ನು ಮಂಡಿಸಲು ಅನುಮತಿ ನೀಡಲಾಯಿತು)

ಶ್ರೀ ರಾವಟಕೃಷ್ಣ ಹೆಗಡೆ.—

"೧೯೮೬–೮೭ನೇ ಸಾಲಿನ ಮಾರ್ಚ್ ೩೧ರಂದು ಕೊನೆಗೊಂಡಿರುವ ಆರ್ಥಿಕ ವರ್ಷದಲ್ಲಿ ಸಂದಾಯ ಮಾಡಬೇಕಾಗಿರುವ ಹೆಚ್ಚುವರಿ ಅನುದಾನ ವಿನಿಯೋಗ ಬೇಡಿಕೆಗಳ ಸಂಖ್ಯೆ ೪, ೮, ೧೨, ೧೯, ೩೦ ೩೩, ೩೬, ೩೭, ೪೦, ೪೩, ೪೪, ೫೬ ೫೩, ಹಾಗೂ ೫೯, ಅನುದಾನ ವಿನಿಯೋಗ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತವನ್ನು ಮಂಜೂರು ಮಾಡ ಬೇಕೆಂದು ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.—

"೧೯೮೬ನೇ ಇಸವಿ ಮಾರ್ಚ್ ೩೧ರಂದು ಕೊನೆಗೊಂಡಿರುವ ಆರ್ಥಿಕ ವರ್ಷದಲ್ಲಿ ಸಂದಾಯ ಮಾಡಬೇಕಾಗಿರುವ ಹೆಚ್ಚುವರಿ ಅನುದಾನ ವಿನಿಯೋಗ ಬೇಡಿಕೆಗಳ ಸಂಖ್ಯೆ ೪, ೮, ೧೨ ೧೯, ೩೦, ೩೩, ೩೬, ೩೭, ೪೦, ೪೩, ೪೪, ೫೬, ೫೩, ಹಾಗೂ ೫೯ ಅನುದಾನ ವಿನಿಯೋಗ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡ ವುದು."

ಪ್ರಸ್ತಾವ ಅಂಗೀಕೃತವಾಯಿತು ಮತ್ತು ಅನುದಾನಗಳನ್ನು ಮಂಜೂರು ಮಾಡಲಾಯಿತು

ಶಾಸನ ರಚನಾ ಕಾರ್ಯಕಲಾಪಗಳು

೧೯೮೬ನೇ ಇಸವಿ ಕರ್ನಾಟಕ ಪುರಸಭೆಗಳ ತಿದ್ದುಪಡಿ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ (ಮಂಜೂರಾದುದು)

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಪಂಚಾಯಿಪಾಲಿಟಿಗೆ ಸಂಬಂಧಪಟ್ಟ ವಿಧೇಯಕ ಪರ್ಯಾಲೋಚನಾ ಘಟ್ಟದಲ್ಲಿದೆ. ಅದನ್ನು ತೆಗೆದುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ.....

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ. ರೂಲಿಂಗ್ ರೆಡಿ ಇದೆ. ಹೊಸದೇನೂ ಅಲ್ಲ ಇದು. ನಿಮ್ಮ ಕಾಲದಲ್ಲಿ ನಮ್ಮ ಕಾಲದಲ್ಲಿ ಎಲ್ಲಾ ಆಗಿರುವುದೇ.

When a motion of the Karnataka Municipalities (Amendment) Bill 1986 be taken into consideration was moved by the Hon'ble Minister for Law and Parliamentary Affairs on 19-8-1986, Hon'ble Members Sriyuths M. Veerappa Moily and Dharam Singh took objection for non-accompaniment of the financial memorandum. The discussion on the Bill was taken up again the Minister on permission read out the financial memorandum which was again objected to be incomplete.